# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ</u>

<u>ಸಿ.ಸಿ. ನಂ.36/2011</u>

CW-1/PW-4

| | | |
|---|---|---|
| ಹೆಸರು | ಃ- | ನರಸಿಂಹರೆಡ್ಡಿ |
| ತಂದೆ ಹೆಸರು | ಃ- | ರೆಡ್ಡಪ್ಪ ರೆಡ್ಡಿ |
| ವಯಸ್ಸು | ಃ- | 53 ವರ್ಷ |
| ವೃತ್ತಿ | ಃ- | ವ್ಯಾಪಾರ |
| ವಾಸ ಸ್ಥಳ | ಃ- | ಜೆ.ಪಿ.ನಗರ, ಬೆಂಗಳೂರು. |
| ದಿನಾಂಕ | ಃ- | 06-03-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿನಾಂಕ 05.10.2010 ರಂದು ನಾನು ನಂಜನಗೂಡಿನಲ್ಲಿ ನೆಸ್ಲೆ ಕಂಪನಿಯಲ್ಲಿರುವ ಕೆಲಸಗಾರರಿಗೆ ಹಣ ನೀಡಲು ಸಂಜೆ 6.30 ಗಂಟೆಗೆ ಹೋಗಿ ಕೆಲಸಗಾರರಿಗೆ ಸಂಬಳ ಕೊಟ್ಟು ವಾಪಸ್ ರಾತ್ರಿ 11.00 ಗಂಟೆಗೆ ಬರುವಾಗ ಬಿಡದಿಯಿಂದ ಮುಂದೆ ಲಕ್ಷ್ಮಿಸಾಗರದ ಗೇಟ್ ಬಳಿ ನೈಸರ್ಗಿಕ ಕರೆಗಾಗಿ ಗಾಡಿ ನಿಲ್ಲಸಿ ಮೂತ್ರ ವಿಸರ್ಜನೆ ಮಾಡುವಾಗ ಐದು ಜನ ಬಂದು ನನ್ನನ್ನು ಮುತ್ತಿಗೆ ಹಾಕಿ, ಮಚ್ಚಿನಿಂದ ನನ್ನ ಕತ್ತಿಗೆ ಹಿಂಭಾಗದಿಂದ ಹೊಡೆದರು. ನನ್ನನ್ನು ಕಾರಿನ ಹಿಂಭಾಗದಲ್ಲಿ ನನ್ನ ತಲೆ ಕೆಳಗೆಮಾಡಿ ಕೂರಿಸಿ, ನನ್ನ ಕತ್ತಿನ ಹಿಂಭಾಗ ಒಂದು ಕತ್ತಿಯನ್ನು ಇಟ್ಟು, ಮತ್ತೊಬ್ಬ ಪಕ್ಕದಲ್ಲಿ ಕುಳಿತುಕೊಂಡು, ಮತ್ತೊಬ್ಬ ನನ್ನ ಕಾರನ್ನು ಸುಮಾರು 15, 20 ಕಿ.ಮೀ ಚಲಾಯಿಸಿಕೊಂಡು ಹೋಗಿ ಲಕ್ಷ್ಮಿಪುರ ಕ್ರಾಸ್‌ನ ರೈಲ್ವೆ ಟ್ರ್ಯಾಕ್ ಬಳಿ ಕಾರನ್ನು ನಿಲ್ಲಿಸಿ ನನ್ನ ಬಟ್ಟೆಯೆಲ್ಲಾ ಬಿಸಾಕಿ, ನನ್ನ ಮೊಬೈಲ್, ಚಾರ್ಜರನ್ನು ಸಹ ಬಿಸಾಕಿದರು. ಈ ವಿಚಾರವನ್ನು ಯಾರಿಗಾದರು

ಹೇಳಿದರೆ ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿ, ನನ್ನನ್ನು ಅಲ್ಲೇ ಬಿಟ್ಟು ಕಾರನ್ನು ತೆಗೆದುಕೊಂಡು ಹೋದರು. ನನ್ನ ಕಾರಿನಲ್ಲಿ ನನ್ನ ಎಸ್.ಬಿ.ಐ., ಮತ್ತು ಕರ್ನಾಟಕ ಬ್ಯಾಂಕಿನ ಎ.ಟಿ.ಎಂ ಕಾರ್ಡ್, ಚಾಲನಾ ಪರವಾನಗಿ, ಕಾರಿನ ಆರ್.ಸಿ., 20,000/- ರೂ ನಗದು ಹಣ ಇತ್ತು. ಕಾರನ್ನು ಈ ಎಲ್ಲದರ ಸಮೇತ ತೆಗೆದುಕೊಂಡು ಹೋದರು. ನಾನು ಅಲ್ಲಿಂದ ಸ್ವಲ್ಪ ದೂರ ನಡೆದುಕೊಂಡು ಬಂದು ದಾರಿಯಲ್ಲಿ ಹೋಗುತ್ತಿದ್ದ ಯಾರೋ ಒಬ್ಬರ ಮೊಬೈಲ್ ಮುಖಾಂತರ ನನ್ನ ಸ್ನೇಹಿತ ಜಯಪ್ರಕಾಶ್‌ಗೆ ಕರೆ ಮಾಡಿ ಬಟ್ಟೆಗಳನ್ನು ತೆಗೆದುಕೊಂಡು ಬರಲು ಹೇಳಿದೆ. ಅವರು ಬಟ್ಟೆ ತಂದು ಕೊಟ್ಟರು. ನಾನು ಬಟ್ಟೆ ಧರಿಸಿಕೊಂಡು ಅವರ ಜೊತೆಯಲ್ಲಿ ಅವರ ಕಾರಿನಲ್ಲಿ ಮನೆಗೆ ಹೋದೆ. ಮನೆಗೆ ಹೋದಾಗ ಬೆಳಗಿನ ಜಾವ 2.30 ರಿಂದ 3.00 ಗಂಟೆ ಸಮಯ.

2. ನಂತರ ಬೆಳಗ್ಗೆ 10.30 ಗಂಟೆಗೆ ಬಿಡದಿ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿರುತ್ತೇನೆ. ದೂರನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ಈಗ **ನಿಪಿ-9(ಬಿ) ಮತ್ತು ನಿಪಿ-9(ಸಿ)** ಎಂದು ಗುರುತಿಸಿರುತ್ತೇನೆ. ನಂತರ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಮಹಜರ್ ಮಾಡಿದರು. ಮಹಜರ್ ಕಾಲಕ್ಕೆ ಚಾಸಾ-5 ಜಯಪ್ರಕಾಶ್ ಹಾಗೂ ಹೇಮಸುಂದರ್ ಇದ್ದರು. ಮಹಜರ್ ಬರೆದಾಗ ಸಮಯ ಮಧ್ಯಾಹ್ನ 12.00 ರಿಂದ 1.00 ಗಂಟೆ ಸಮಯ. ಮಹಜರನ್ನು ನೋಡಿದೆ ಗುರುತಿಸಬಲ್ಲೆ. ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು **ನಿಪಿ-2(ಬಿ)** ಎಂದು ಗುರುತಿಸಿರುತ್ತೇನೆ. ಅದೇ ದಿನ ಪೊಲೀಸರ ಮುಂದೆ ಹೇಳಿಕೆ ಸಹ ನೀಡಿರುತ್ತೇನೆ.

3. ನಂತರ 27 ನೇ ತಾರೀಖು ಪೊಲೀಸರು ಫೋನ್ ಮಾಡಿ ನನ್ನನ್ನು ಠಾಣೆಗೆ ಕರೆಸಿ, ಸುಲಿಗೆಯಾಗಿದ್ದ ನನ್ನ ಕಾರನ್ನು ತೋರಿಸಿದರು. ನನ್ನ ಕಾರಿನ ನೇಮ್ ಪ್ಲೇಟ್ ಬದಲಾಯಿಸಲಾಗಿದ್ದು, ಚಾಸಿಸ್ ನಂಬರ್, ಇಂಜಿನ್ ನಂಬರ್ ನನ್ನ ಕಾರಿನ ನಂಬರ್ ಆಗಿತ್ತು. ಆ ಕಾರನ್ನು ನಾನು ಪರಿಶೀಲಿಸಿ ನನ್ನದೆ ಎಂದು ಹೇಳಿದೆ. ಆ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಕಾರನ್ನು, ವಾಹನದ ಆರ್.ಸಿ., ಎಸ್.ಬಿ.ಐ., ಮತ್ತು ಕರ್ನಾಟಕ ಬ್ಯಾಂಕಿನ ಡೆಬಿಟ್ ಕಾರ್ಡ್, ಡಿ.ಎಲ್., ಪಾನ್ ಕಾರ್ಡ್, ಆಧಾರ್ ಕಾರ್ಡನ್ನು ನ್ಯಾಯಾಲಯದ ಆದೇಶದಂತೆ ನನ್ನ ವಶಕ್ಕೆ ಬಿಡಿಸಿಕೊಂಡಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.